‘ಪಾಲ್, ಇದು ನಿಮ್ಮ ಪತ್ರ’ ಅಂದು ನೀನಾ ಪೋಸ್ಟ್ ಬಾಕ್ಸಿನಿಂದ ಒಂದು ಕಾರ್ಡ್ ತೆಗೆದುಕೊಂಡು ನನ್ನ ಬಳಿಗೆ ತಂದಿದ್ದಳು.

ನನ್ನ ಹೆಸರಿಗೆ ನೀನಾಳ ಮನೆಗೆ ಬಂದ ಇದು ಮೊದಲ ಪತ್ರವಾಗಿತ್ತು. ನಾನು ಕಾರ್ಡ್ ತೆರೆದೆ.

‘ಏನು ಪತ್ರ?’ ಅವಳು ಕಾರ್ಡಿನಲ್ಲಿ ಇಣಕಿ ನೋಡುತ್ತಾ ಕೇಳಿದಳು.

‘ಆಮಂತ್ರಣ ಪತ್ರ. ನನ್ನ ಬ್ರದರ್ ತನ್ನ ಮಗನ ಕನ್ಫರ್ಮೇಶನ್ ಸೆರೆಮನಿಗೆ ನಮ್ಮನ್ನು ಆಹ್ವಾನಿಸಿದ್ದಾನೆ.’

‘ಕನ್ಫರ್ಮೇಶನ್ ಸೆರೆಮನಿ’.

ಹೋಲಿ ಬ್ಯಾಪ್ಟಿಸಮ್ ಮತ್ತು ಹೋಲಿ ಕನ್ಫರ್ಮೇಶನ್ ಎನ್ನುವುದು ರೋಮನ್ ಕ್ಯಾಥೊಲಿಕ್‌ನಲ್ಲಿರುವ ಎರಡು ವಿಶೇಷ ಧಾರ್ಮಿಕ ಅನುಷ್ಠಾನಗಳು. ಶೈಶವಾವಸ್ಥೆಯಲ್ಲಿ ಚರ್ಚ್‌ನಲ್ಲಿ ಶಿಶುವನ್ನು ನೀರಿನಿಂದ ಪ್ರೋಕ್ಷಣೆ ಮಾಡಿ ಶಿಶುವನ್ನು ಕ್ರೈಸ್ತಮತಕ್ಕೆ ಅಧೀನಗೊಳಿಸುವ ಕ್ರಿಯೆಗೆ ಬ್ಯಾಪ್ಟಿಸಮ್ ಎನ್ನಲಾಗುತ್ತದೆ. ಈ ಧಾರ್ಮಿಕ ಆಚರಣೆಯ ಸಮಯದಲ್ಲಿ ಶಿಶುವಿಗೆ ನಾಮಕರಣವನ್ನು ಸಹ ಮಾಡಲಾಗುತ್ತದೆ.

ಕಿಶೋರಾವಸ್ಥೆಯಲ್ಲಿ ಕನ್ಫರ್ಮೇಶನ್ ಸಂಸ್ಕಾರ ನಡೆಯುತ್ತದೆ. ಆಗ ಅವನನ್ನು ಔಪಚಾರಿಕವಾಗಿ ಕ್ರೈಸ್ತನೆಂದು ಘೋಷಿಸಲಾಗುತ್ತದೆ. ಆಗ ಸಂಬಂಧಿಸಿದ ವ್ಯಕ್ತಿ ತನಗೆ ಕ್ರೈಸ್ತಮತ ಒಪ್ಪಿಗೆಯಿದೆ. ತಾನು ಪ್ರಭು ಜೀಸಸನೊಂದಿಗೆ ಬಲವಾದ ಸಂಬಂಧವನ್ನು ಕಟ್ಟಿಕೊಳ್ಳುತ್ತೇನೆ ಎಂದು ಹೇಳುವಷ್ಟು ಪರಿಪಕ್ವನಾಗಿರುತ್ತಾನೆ. ನಾಲ್ವರು ಸಹೋದರರು ಸಹೋದರಿಯರಾದ ನಮಗೆ ಈ ಸಂಸ್ಕಾರ ನಡೆದಿದೆ.

‘ಈ ಸಂಪ್ರದಾಯಗಳು ತಮ್ಮ ಮಕ್ಕಳ ಪೀಳಿಗೆಗೂ ಹೋಗುತ್ತವೆ ಎಂಬುವಷ್ಟು ವಿಲಿಯಮ್ ಧಾರ್ಮಿಕನಾಗುತ್ತಾನೆಂದು ನಾನು ಯೋಚಿಸಿರಲಿಲ್ಲ. ನನಗೆ ತಿಳಿದಂತೆ ಲೂಸಿ ಮತ್ತು ಗ್ರೇಸಿಗೆ ಇಂಥ ಯಾವ ಸಂಸ್ಕಾರಗಳೂ ಆಗಿರಲಿಲ್ಲ’ ಎಂದು ನಾನು ನೀನಾಗೆ ಹೇಳಿದೆ.

‘ಕರೀನಾ ಮತ್ತು ಜೊಹಾನಾಳಿಗೆ ಈ ಸಂಸ್ಕಾರಗಳಾಗಿವೆ. ಭಾರತೀಯ ಸಂಸ್ಕಾರಗಳಾದ ನಾಮಕರಣ, ಉಪನಯನ ಮುಂತಾದವುಗಳು ಅಮ್ಮ ಅಪ್ಪನಿಂದ ಲಭಿಸಿವೆ’. ಅವಳು ಕಳೆದು ಹೋದ ಧ್ವನಿಯಲ್ಲಿ ಹೇಳಿದಳು. ಮರುಕ್ಷಣವೇ ಅವಳು ಹೇಳಿದಳು.

‘ನಾನೂ ನಿಮ್ಮ ಜೊತೆಗೆ ಬರ್ತೀನಿ, ಸ್ಕಾಟ್.’

‘ನೀನು ಹೋಗುವ ಅಗತ್ಯವಿಲ್ಲ ನೀನಾ’ ನಾನು ಅವಳಿಗೆ ಹೇಳಿದೆ.

‘ನಾನು ನಿಮ್ಮೊಂದಿಗೆ ಬರಬಾರದೆಂದು ನೀವು ಬಯಸ್ತೀರಾ?’ ಅವಳು ರೇಗಿದಳು.

‘ಇಲ್ಲ, ನಾನು ಹೀಗೆ ಹೇಳಲಿಲ್ಲ. ನಾನು ನಿನ್ನನ್ನು ಕ್ರೈಸ್ತ ಸಂಪ್ರದಾಯಗಳ ಅನುಷ್ಠಾನಗಳಲ್ಲಿ ಭಾಗವಹಿಸಲೋಸುಗ ಬಾಧ್ಯಗೊಳಿಸಲು ಬಯಸುವುದಿಲ್ಲ. ಅಲ್ಲಿ ನಿನಗೆ ಬೇಸರವಾದರೆ...’

‘ಇದೊಂದು ಪಾರಿವಾರಿಕ ಆಯೋಜನೆಯಾಗಿದೆ ಸ್ಕಾಟ್. ನಾನು ನಿಮ್ಮೊಂದಿಗೆ ಬರ್ತಿದ್ದೇನೆ ಅಷ್ಟೇ...’ – ಅವಳು ಉತ್ಸಾಹದಿಂದ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದಳು.

‘ಏನು ಧರಿಸಲಿ?’

‘ಏನಾದ್ರು ಧರಿಸು...’

‘ಚರ್ಚ್‌ನಲ್ಲಿ ಸ್ಕರ್ಟ್ ನಡೆಯುತ್ತಾ?’

‘ಹೂಂ, ಸ್ಕರ್ಟ್ ಯೂರೋಪಿಯನ್ ಮಹಿಳೆಯರ ಒಂದು ಔಪಚಾರಿಕ ಉಡುಗೆಯಾಗಿರುತ್ತದೆ’.

‘ಡೇನಿಯಲ್‌ಗೆ ಏನು ಕೊಳ್ಳೋಣ?’

‘ಏನು ಬೇಕಾದರೂ ಖರೀದಿಸು’.

‘ಅವನಿಗೆಷ್ಟು ವಯಸ್ಸು?’

‘ಗೊತ್ತಿಲ್ಲ’.

‘ನಿಮಗೆ ನಿಮ್ಮ ಸಹೋದರನ ಮಗನ ವಯಸ್ಸು ಗೊತ್ತಿಲ್ವ?’

ನಾನೇನೋ ಹೇಳಬೇಕೆಂದಿದ್ದೆ, ಆಗಲೇ ಸಮೀಪದಲ್ಲಿ ಕೂತಿದ್ದ ಕರೀನಾ ಕೂಡಲೇ ಹೇಳಿದಳು, ‘ಇವರಿಗೆ ಇವರ ಪುತ್ರಿಯರ ವಯಸ್ಸು ಗೊತ್ತಿದೆಯಲ್ಲ, ಅದೇ ದೊಡ್ಡ ವಿಷಯ’.

ಅವಳ ಟಿಪ್ಪಣಿಯನ್ನು ನಾನೂ ಪರಿಗಣಿಸಲಿಲ್ಲ, ನೀನಾ ಸಹ ಪರಿಗಣಿಸಲಿಲ್ಲ. ಸರಿ, ಕರೀನಾಳೇ ಸೂಚಿಸಿದಳು, ‘ಅವನ ವಯಸ್ಸು ಕಾರ್ಡಿನಲ್ಲಿ ಬರೆದಿರಬೇಕು.’

ನೀನಾ ಕಾರ್ಡ್ ತೆರೆದಳು, ‘ಹದಿನಾಲ್ಕು ವರ್ಷ. ಹೂಂ! ಹದಿನಾಲ್ಕು ವರ್ಷದ ಹುಡುಗನಿಗೆ ಏನು ಕೊಳ್ಳಬಹುದು...?’

ನಾನು ಮೌನವಹಿಸಿದೆ. ಅವಳು ತನ್ನ ಪುತ್ರಿಯರನ್ನು ಕೇಳಿದಳು, ‘ಕರೀನಾ–ಜೊಹಾನಾ, ಹದಿನಾಲ್ಕು ವಯಸ್ಸಿನ ಹುಡುಗನಿಗೆ ಏನು ಇಷ್ಟವಾಗುತ್ತೆ?’

‘ಗೊತ್ತಿಲ್ಲ’ ಇಬ್ಬರೂ ಹೆಗಲು ಕುಣಿಸುತ್ತಾ ಹೇಳಿದರು.

ಒಂದು ಕ್ಷಣದ ನಂತರ ಕರೀನಾ ವ್ಯಂಗ್ಯವಾಡಿದಳು, ‘ಹೀಗೆ ಮಾಡಿ. ಅವನಿಗೆ ಗುಲಾಬಿ ಬಣ್ಣದ ಒಂದು ಸ್ಕಾರ್ಫ್ ಕೊಳ್ಳಿ’ ಹೀಗೆಂದು ಅವಳು ಖೀ ಖೀ ಎಂದು ನಕ್ಕಳು. ಅವಳೊಂದಿಗೆ ಅವಳ ತಂಗಿ ಜೋಹಾನಾ ಸಹ ನಕ್ಕಳು.

‘ಇದೇನು ಹೀಗೆ ಹೇಳುತ್ತಿರುವೆ ಅವನ ಬಗ್ಗೆ? ನೀನೆಂದೂ ಅವನನ್ನು ಭೇಟಿಯೂ ಆಗಿಲ್ಲ’ ನೀನಾ ತನ್ನ ಮಗಳಿಗೆ ಗದರಿಸಿದಳು.

‘ಒಬ್ಬರನ್ನು ಅರ್ಥ ಮಾಡಿಕೊಳ್ಳಲು ಭೇಟಿ ಮಾಡುವ ಅವಶ್ಯಕತೆಯಿಲ್ಲ, ಮಮ್ಮಿ’ ಎಂದಳು ಜೊಹಾನಾ.

‘ಒಂದು ವೇಳೆ ನಾನು ಅವನ ಜಾಗದಲ್ಲಿದ್ದಿದ್ದರೆ ನನ್ನ ಕನ್ಫರ್ಮೇಶನ್ ಅಲ್ಲ, ‘ನಾನ್–ಕನ್ಫರ್ಮೇಶನ್’ ಸೆರೆಮನಿ ಮಾಡಿಸಿಕೊಳ್ತಿದ್ದೆ’ ಎಂದಳು ಕರೀನಾ.

ನಾನು ನೀನಾಳ ಪುತ್ರಿಯರ ವರ್ತನೆಯಿಂದ ಬೇಸರಗೊಂಡೆ. ಇದು ಆರಂಭವಾಗಿತ್ತು.

ನಾನು ಮತ್ತು ನೀನಾ ಡೇನಿಯಲ್‌ನ ಕನ್ಫರ್ಮೇಶನ್ ಸೆರೆಮನಿಯಲ್ಲಿ ಭಾಗವಹಿಸಲು ಸ್ಕಾಟ್ಲೆಂಡಿಗೆ ಹೋದೆವು. ಹೆಮಿಲ್ಟನ್‌ನಲ್ಲಿ ವಿಲಿಯಮ್ ಮೆಡಿಕಲ್ ಪ್ರಾಕ್ಟೀಸ್ ಮಾಡುತ್ತಿದ್ದ; ಅಲ್ಲಿಯ ಸೆಂಟ್ ಜಾನ್ ಚರ್ಚ್‌ನಲ್ಲಿ ಸೆರೆಮನಿಯನ್ನು ಆಯೋಜಿಸಲಾಗಿತ್ತು. ನನ್ನೆಲ್ಲಾ ಪರಿವಾರ ಅಲ್ಲಿತ್ತು. ಅವನಿಗೆ ಅವನ ಅಜ್ಜ ಡೇನಿಯಲ್ ಹೆಸರನ್ನೇ ಇಡಲಾಗಿತ್ತು. ಅಪ್ಪ–ಅಮ್ಮ ಇಬ್ಬರೂ ಹೆಚ್ಚು ಸಂತಸದಲ್ಲಿರುವಂತೆ ಕಾಣಬರುತ್ತಿದ್ದರು. ಅವರಿಗೆ ಇಂಥ ಧಾರ್ಮಿಕ ಅನುಷ್ಠಾನಗಳು ತುಂಬಾ ಇಷ್ಟವಾಗುತ್ತಿದ್ದವು; ಆದರೆ ಇದನ್ನು ಅವರು ವ್ಯಕ್ತಪಡಿಸುತ್ತಿರಲಿಲ್ಲ. ಅವರು ವಿಲಿಯಮ್‌ನನ್ನು ನನಗಿಂತ ಹೆಚ್ಚು ಪ್ರಶಂಸಿಸುತ್ತಿದ್ದರು ಎಂಬುದನ್ನು ನಾನು ಸ್ಪಷ್ಟವಾಗಿ ಮನಗಾಣುತ್ತಿದ್ದೆ. ಅವರಿಗೆ ವಿಲಿಯಮ್ ಓರ್ವ ನಿಜವಾದ ಕ್ರಿಶ್ಚಿಯನ್ ಪುತ್ರ, ಓರ್ವ ಯಶಸ್ವಿ ವೈದ್ಯ, ತನ್ನ ಧರ್ಮ ಮತ್ತು ಸಂಪ್ರದಾಯಗಳನ್ನು ಪ್ರೀತಿಸುವ ಮತ್ತು ನನಗಿಂತ ಹೆಚ್ಚು ಯೋಗ್ಯ ಪುತ್ರನಾಗಿದ್ದ. ನಾನು ಹಿರಿಯ ಪುತ್ರನಾಗಿದ್ದಾಗ್ಯೂ ನಾನು ಅವರನ್ನು ಅನೇಕ ಬಾರಿ ನಿರಾಶೆಗೊಳಿಸಿದ್ದೇನೆ.

ವಿಲಿಯಮ್ ಮತ್ತು ಅವನ ಹೆಂಡತಿ ಲಾರಾ ಅಲಂಕರಿಸಿಕೊಂಡು ಅತಿಥಿಗಳನ್ನು ಸ್ವಾಗತಿಸುತ್ತಿದ್ದರು. ನಮ್ಮನ್ನು ನೋಡಿದ ಅವರು ತಕ್ಷಣ ನಮ್ಮೆಡೆಗೆ ಧಾವಿಸಿ ಬಂದರು. ಅವರು ಸ್ಕಾಟಿಷ್ ಪರಂಪರೆಯಂತೆ ನನ್ನ ಮತ್ತು ನೀನಾಳ ಗಲ್ಲಗಳನ್ನು ಚುಂಬಿಸಿದರು. ಲಾರಾ ನೀನಾಳನ್ನು ತನ್ನ ಬಾಹುಗಳಲ್ಲಿ ಬಂಧಿಸಿಕೊಂಡು ಹೇಳಿದಳು, ‘ಇಂಡಿಯನ್ ಸೊಸೆ... ನೀನೂ ಬಂದಿರುವುದನ್ನು ನೋಡಿ ನಮಗೆ ತುಂಬಾ ಖುಷಿಯಾಗಿದೆ.’

ಲಾರಾ ನೀನಾಳನ್ನು ಸಾಮಾನ್ಯವಾಗಿ ತಮಾಷೆ ಮಾಡುತ್ತಿದ್ದಳು. ಅವಳನ್ನು ಭೇಟಿಯಾದಾಗ, ಅವಳನ್ನು ಬರಸೆಳೆದು ತಬ್ಬಿಕೊಳ್ಳುತ್ತಿದ್ದಳು. ‘ಇಂಡಿಯನ್ ಸೊಸೆ’ ಎಂದು ಗೇಲಿ ಮಾಡುತ್ತಿದ್ದಳು. ಅವಳ ಈ ಸ್ನೇಹ ನಿಜವೆಂದು ತೋರುತ್ತಿರಲಿಲ್ಲ.

ಅಮ್ಮ ಅಪ್ಪ ಸಹ ನೀನಾಳನ್ನು ನೋಡಿ ಹೇಳಿದರು, ‘ಓಹ್ ನೀನಾ, ನೀನು ಸಹ ಬಂದಿದ್ದೀಯ. ನಮಗೆ ನಿನ್ನನ್ನು ನೋಡಿ ವಿಶೇಷವಾಗಿ ಸಂತೋಷವಾಗುತ್ತಿದೆ.’

‘ಓಹ್ ನೀನಾ, ನೀನು ಸಹ ಬಂದಿದ್ದೀಯ...’ ಈ ವಾಕ್ಯವನ್ನು ನೀನಾ ಅನೇಕರ ಬಾಯಿಯಿಂದ ಕೇಳಬೇಕಾಯಿತು.

‘ಇಲ್ಲಿ ಎಲ್ಲರೂ ನನಗೇಕೆ ಹೀಗೆ ಹೇಳುತ್ತಿದ್ದಾರೆ? ನಾನಿಲ್ಲಿಗೆ ಬರಬಾರದಿತ್ತೆ?’ ಅವಳು ನನ್ನನ್ನು ಮುಗ್ಧತೆಯಿಂದ ಕೇಳಿದಳು.

ನಾನೇನು ಹೇಳುವುದು? ಆ ಸಮಾರಂಭದಲ್ಲಿ ನೀನಾಳನ್ನು ಹೊರತುಪಡಿಸಿ ಉಳಿದವರೆಲ್ಲರೂ ಬಿಳಿಯಾಗಿದ್ದರು.

ಸರಿ, ಧಾರ್ಮಿಕ ಸಮಾರಂಭ ಆರಂಭವಾಯಿತು. ಚರ್ಚಿನ ಅನುಯಾಯಿಗಳು ಮತ್ತು ಪರಸ್ಪರ ಮಿತ್ರ ಸಂಬಂಧಿಕರಾದ ಅತಿಥಿಗಳು ಮರದ ಬೆಂಚುಗಳಲ್ಲಿ ತಮ್ಮ ಸ್ಥಾನದಲ್ಲಿ ಕೂತರು. ಧರ್ಮಾಧ್ಯಕ್ಷರು ವೇದಿಕೆಯಲ್ಲಿ ಕೂತರು. ಡೇನಿಯನ್ ತನ್ನ ತಂದೆ ತಾಯಿಯೊಂದಿಗೆ ವೇದಿಕೆಗೆ ಬಂದ. ಅವನು ಇಬ್ಬರಿಗಿಂತಲೂ ಉದ್ದವಾಗಿದ್ದ. ಸೂಟು ಬೂಟು ಮತ್ತು ಟೈ ಧರಿಸಿದ್ದ ಹದಿನಾಲ್ಕರ ಡೇನಿಯಲ್ ಪರಿಪಕ್ವನಾದಂತೆ ತೋರುತ್ತಿದ್ದ. ಕೊರಳಿಗೆ ಟೈ, ತುಟಿಗಳ ಮೇಲೆ ತೆಳು ಮೀಸೆಗಳು... ಅವನು